ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಗೆ ಹಾಸಿಗೆಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದು.

768. ಶ್ರೀ ಆರ್. ಗುರುದೇವ್ (ಸಕಲೇಶಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸಕಲೇಶಪುರ ಕ್ರಾಫರ್ಡ್ ಜನರಲ್ ಆಸ್ಪತ್ರೆಯಲ್ಲಿ ಒಳ-ರೋಗಿಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಜಾಸ್ತಿಯಾಗಿದ್ದು ಹಾಸಿಗೆಗಳ ಸಂಖ್ಯೆ ಕಡಿಮೆ ಇದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಾಸಿಗೆಗಳ ಸಂಖ್ಯೆಯನ್ನು 200 ಕ್ಕೆ ಹೆಚ್ಚಿಸುವ ಯೋಜನೆ ಸರ್ಕಾರಕ್ಕೆ ಇದೆಯೇ;

ಇ) ಆಲೂರು ಪಟ್ಟಣದಲ್ಲಿರುವ ಪಿ.ಹೆಚ್.ಯು. ನ್ನು ಹಿಂದಿನ ಸರ್ಕಾದವರು ಜನರಲ್ ಆಸ್ಪತ್ರೆಯೆಂದು ಘೋಷಣೆ ಮಾಡಿದ್ದರೂ ಸಹ ಕಾರ್ಯಗತಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ಕಾರ್ಯಗತಗೊಳಿಸಲು ತೆಗೆದುಕೊಂಡಿರುವ ಕ್ರಮಗಳಾವುವು;

ಉ) ಇಲ್ಲದಿದ್ದಲ್ಲಿ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ. ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಇಲ್ಲ

ಆ) ಸದ್ಯದಲ್ಲಿಲ್ಲ

ಇ) ಬಂದಿದೆ

ಈ) ಈ ಕಾಮಗಾರಿಯ ನಕ್ಷೆ ಮತ್ತು ಅಂದಾಜು ಪಟ್ಟಿಯು ಮುಖ್ಯ ಅಭಿಯಂತರರಿಂದ ಈಗ ತಾನೇ ಬಂದಿದೆ.

ಉ) ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ರಾಜ್ಯ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅನುದಾನ.

769. ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : – ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

ಅ) ರಾಜ್ಯದಲ್ಲಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ) ಗಳಿಗೆ ಅನುದಾನ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಆ) ಇಲ್ಲದಿದ್ದಲ್ಲಿ ಆ ಖಾಸಗಿ ಐ.ಟಿ.ಐ. ಗಳು ಅನುದಾನಕ್ಕೆ ಒಳಪಡದೇ ಇರಲು ಕಾರಣವೇನು ;

ಇ) ಇತರೇ ರಾಜ್ಯಗಳಲ್ಲಿ ಖಾಸಗಿ ಐ.ಟಿ.ಐ. ಗಳಿಗೆ ಅನುದಾನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ರಾಜ್ಯದಲ್ಲಿ ಸಾಕಷ್ಟು ಸರ್ಕಾರಿ ಹಾಗೂ ಖಾಸಗಿ ಐ.ಟಿ.ಐ. ಶಾಲೆಗಳನ್ನು ತೆರೆಯಲು ಅವಕಾಶ ನೀಡುವುದು ಸರಿಯೇ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) –

ಅ) ಪರಿಶೀಲಿಸಲಾಗುತ್ತಿದೆ

ಆ) ಅನ್ವಯಿಸುವುದಿಲ್ಲ

ಇ) ಬಂದಿದೆ

ಈ) ಕುಶಲ ಕರ್ಮಿಗಳಿಗೆ ಬೇಡಿಕೆಯು ಹೆಚ್ಚುತ್ತಿರುವುದರಿಂದ, ಕ್ರಮವು ಸರಿಯಾಗಿದೆ.